


ಎಡದಿಂದ ಬಲಕ್ಕೆ:

1. ಕೆಟ್ಟವರ ಕಾಟ ಸಹಿಸಲಾಗದೆ ಭಾರೀ ಹಿಂಸೆ, ದುಃಖ (3)
3. ಬುದ್ಧಿಯನ್ನು ಬೆಳೆಸಲು ಒಳ್ಳೇ ಅಡಿಪಾಯ (3)
4. ಕೆಂಪಗಾಗಿರುವುದು ಏಕೆ, ಆ ಪವಿತ್ರ ಪಾದರಕ್ಷೆ? (3)
6. ಗಸಗಸೆಯನ್ನು ಬೆಳೆದಿದ್ದಾರೆಂದು ಹರಡಿರುವುದು ಗುಟ್ಟು ಮಾತು (4)
7. ಹೆಬ್ಬುಲಿಯನ್ನು ಹಿಡಿಯಬಲ್ಲಂತಿದೆ ತೋಳಿನ ಶಕ್ತಿ (4)
9. ಗಡಿಬಿಡಿಯ ಪರಿಸ್ಥಿತಿಯಿಂದ ಕಡೆಗೂ ಮುಕ್ತಿ ಸಿಕ್ಕಿತು (4)
11. ಎಂಥ ಪಾಡಾಯಿತು ನೋಡಿ ಪಾಪ, ಬಹಳ ಅಶಕ್ತ (4)
15. ಕಂಡವರನ್ನೆಲ್ಲ ಕೆಣಕುತ್ತಾನೆ ದುಷ್ಟ (3)
16. ದೊರಕಿದ್ದನ್ನೆಲ್ಲ ಒಟ್ಟು ಮಾಡಿ ಬೆರೆಸು (3)
17. ಮೂರೆಣಿಸಲೂ ಬಾರದವ ಆಕೆಯ ಗಂಡ (3)

ಮೇಲಿಂದ ಕೆಳಕ್ಕೆ :

1. ಸಂದಿಗೊಂದಿಗಳಲ್ಲಿ ಓಡಾಡ ಹೋಗಿ ಇಕ್ಕಟ್ಟಿಗೆ ಸಿಲುಕಿದ (3)
2. ಪೆಟ್ಟಿಗೆ ಪೆಟ್ಟಿಗೆಯಲ್ಲೂ ಬರೀ ಅಂಚೆ (3)
3. ಗಾಬರಿಯಾಗುವಂತೆ ಶೇಖರಗೊಂಡಿದೆ ಬರೀ ನೊರೆ (3)
4. ಏನನ್ನೂ ಹುಡುಕಬೇಡ, ಸುಮ್ಮನೆ ನೆಲಕ್ಕೆ ಬೀಳಿಸು (3)
6. ಬೆಳ್ಳಗೂ ಇರಬಹುದು, ಪ್ರಸಿದ್ಧ ಪ್ರೇಮ ಕುಸುಮ (3)
8. ಡೋಲಾಯಮಾನಸ್ಥಿತಿ ತಲುಪಿದೆ ಆ ಯುದ್ಧ (3)
10. ಕೇವಲ ಅಗ್ಗಳಿಕೆಗಾಗಿ ಈ ಸಂಪಾದನೆ (3)
12. ಮೂರಡಿ ಉದ್ದದ ಭಾರೀ ಬುಡುಬುಡಿಕೆ (3)
13. ಕರ್ಪೂರವನ್ನೂ ಗುರುತಿಸಲಾರ, ಪೆದ್ದ (3)
14. ಆಕೆಯ ಕೈಯಿಂದ ಹೇಗೆ ಕಾಣೆಯಾಯಿತು ಕಡಗ? (3)

## 22-12-2016ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಧೋಗತಿ 3. ಧಮನಿ 4. ರುಪಾಯಿ 6. ಅಗಣಿತ 8. ಕಾತುರತೆ 10. ಸರಿದಾರಿ 12. ನವದೊರೆ 16. ಣರಹ (= ರಹಣ ಹಿಂದುಮುಂದು) 17. ಕಾಣಿಕೆ 18. ಕರ್ಮಫಲ

ಮೇಲಿಂದ ಕೆಳಕ್ಕೆ :

1. ಅನಿತ್ಯ 2. ತಿರುಪೆ 3. ಧರಣಿ 5. ಯಿರಾತು (ತುರಾಯಿ ತಲೆಕೆಳಗು ) 6. ಅನಾಯಾಸ 7. ತರಾತುರಿ 8. ಕಾಳಧನ 9. ತೆರೆಮರೆ 11. ದಾರುಣ 13. ವದನ 14. ಕುಹಕ 15. ಸಕಾಲ

ಪ್ರಶ್ನಾಂಕಣ

# ಪ್ರಾಣಿ ಕೊಂಬು: ಏನೇನು ವಿಧ?

'ಕೊಂಬು': ಅದು ಕೆಲವೇ ಬಗೆಯ ಪ್ರಾಣಿಗಳಿಗೆ ನಿಸರ್ಗ ತೊಡಿಸಿರುವ ಶಿರಾಲಂಕಾರ. ಕೇವಲ ಸ್ತನಿ ವರ್ಗದ ಒಟ್ಟು 87 ಕುಟುಂಬಗಳ ಪೈಕಿ ಐದು ಕುಟುಂಬಗಳ ಒಟ್ಟು 206 ಪ್ರಭೇದಗಳ ಪ್ರಾಣಿಗಳು ಮಾತ್ರ ಕೊಂಬಿನಲಂಕಾರ ಪಡೆದಿವೆ. ಅವುಗಳು ಯಾವುವೆಂದರೆ ಹಸು, ಕುರಿ, ಮೇಕೆ ಇತ್ಯಾದಿ 143 ಪ್ರಭೇದಗಳಿಂದ ಕೂಡಿದ 'ಬೋವಿಡೇ' ಕುಟುಂಬ (ಚಿತ್ರ 2), ಐದು ಪ್ರಭೇದಗಳ ಘೇಂಡಾಮೃಗಗಳ 'ರೈನೋಸಿರೋಟಿಡೇ' ಕುಟುಂಬ (ಚಿತ್ರ 4), ಜಿರಾಫ್ ಮತ್ತು ಒಕಾಪಿಗಳ 'ಜಿರಾಫಿಡೇ' (ಚಿತ್ರ 3), ವಿಧ ವಿಧ ಒಟ್ಟು 55 ಪ್ರಭೇದಗಳ ಜಿಂಕೆಗಳ 'ಸೆರ್ವಿಡೇ'(ಚಿತ್ರ 1) ಮತ್ತು ಏಕೈಕ ಪ್ರಭೇದವನ್ನೊಳಗೊಂಡ ಪ್ರಾಂಗ್ ಹಾರ್ನ್ ಆಂಟಿಲೋಪ್ ನ 'ಆಂಟಿಲೋಕ್ಯಾಪ್ರಿಡೇ' ಕುಟುಂಬ. ವಿಸ್ಮಯ ಏನೆಂದರೆ ಈ ಪ್ರಾಣಿಗಳ ಕೊಂಬುಗಳ ರಚನೆ, ದ್ರವ್ಯ ಸಂಯೋಜನೆ, ಬಾಹ್ಯ ಸ್ವರೂಪ, ಉಪಯೋಗ ಇತ್ಯಾದಿಗಳೆಲ್ಲ ಕುಟುಂಬದಿಂದ ಕುಟುಂಬಕ್ಕೆ ತುಂಬ ವಿಭಿನ್ನ.

* ಬೋವಿಡೇ ಕುಟುಂಬದ ಪ್ರಾಣಿಗಳ ಕೊಂಬುಗಳದು ಗರಿಷ್ಠ ವೈವಿಧ್ಯ. ಚೂಪು ತುದಿಯ ಈ ಕೊಂಬುಗಳು 'ಕೆರಟಿನ್' ನಿಂದ ನಿರ್ಮಿತ. ಹೆಣ್ಣು ಗಂಡು ಎರಡರಲ್ಲೂ ಬೆಳೆದು ಜೀವನ ಪೂರ್ತಿ ಶಾಶ್ವತವಾಗಿ ಉಳಿವ ಈ ಕೊಂಬುಗಳದು ನೇರವಾದ, ಡೊಂಕು ಡೊಂಕಾದ, ಬಾಗಿದ, ಸುರುಳಿಯಾಕಾರದ ಹಾಗೆಲ್ಲ ನಾನಾ ವಿಧ ರೂಪ (ಚಿತ್ರ 2).

* ಸೆರ್ವಿಡೇ ಕುಟುಂಬದ ಪ್ರಾಣಿಗಳ ಶಿರ ಶೃಂಗಾರಗಳು ಗಂಡುಗಳಿಗೆ ಮಾತ್ರ ಸೀಮಿತ. ಮೂಳೆ ವಸ್ತುವಿನಿಂದ ಸೃಷ್ಟಿಗೊಳ್ಳುವ ಈ ಕೊಂಬುಗಳು ಗಿಡ ಮರಗಳ ಕೊಂಬೆ ರಂಬೆಗಳಂತೆ ಬಹುಕವಲುಗಳೊಡನೆ, ಕೆಲವು ಪ್ರಭೇದಗಳಲ್ಲಿ ಬಹಳ ಬೃಹದಾಕಾರವಾಗಿಯೂ ಬೆಳೆದು ನಿಲ್ಲುತ್ತವೆ. ವಿಶೇಷ ಏನೆಂದರೆ ಈ ಕೊಂಬುಗಳು ಸಂತಾನ ಕಾಲದಲ್ಲಿ ಮಾತ್ರ ಹುಟ್ಟಿ ಬೆಳೆದು ಆ ಕಾಲ ಮುಗಿದೊಡನೆ ಉದುರಿ ಹೋಗುತ್ತವೆ. ಹೀಗೆ ಪ್ರತಿ ವರ್ಷ ನವೀಕರಣಗೊಳ್ಳುತ್ತವೆ (ಚಿತ್ರ 1).




* ಜಿರಾಫಿಡೇ ಕುಟುಂಬದ ಪ್ರಾಣಿಗಳ ಕೊಂಬುಗಳು ನೆತ್ತಿಯ ಮೇಲೆ ಎದ್ದು ನಿಂತ ಜೋಡಿ ಜುಟ್ಟುಗಳಂತೆ ಕಾಣುತ್ತವೆ. ಗೇಣುದ್ದ ಮೀರದ ಈ ಮೂಳೆ ರಚನೆಗಳ ಮೇಲೆ ಕೂದಲು ಸಹಿತ ಚರ್ಮದ ಹೊದಿಕೆ ಇರುತ್ತದೆ (ಚಿತ್ರ 3).

* ರೈನೋಸಿರಾಟಿಡೇ ಪ್ರಭೇದಗಳದು ಬಹಳ ವಿಭಿನ್ನ ಬಗೆಯ ಕೊಂಬು ; ಮೂಗಿನ ಮೇಲೆ ಚೂರಿಯಂತೆ ಬೆಳೆದು ನಿಲ್ಲುವ ಸ್ವರೂಪ. ಕೆರಟಿನ್ ನ ಈ ಶಾಶ್ವತ ರಚನೆ ಆಫ್ರಿಕದ ಪ್ರಭೇದಗಳಲ್ಲಿ ಎರಡೆರಡು; ಉಳಿದವುಗಳಲ್ಲಿ ಒಂದೊಂದು (ಚಿತ್ರ 4 ).

* ಆಂಟಿಲೊಕ್ಯಾಪ್ರಿಡೇ ಕುಟುಂಬದ ಪ್ರಾಣಿ ಪ್ರಭೇದದ್ದು ತಲೆಯ ಮೇಲೆ ಪುಟ್ಟ ಕವೆಯಂತೆ ಬೆಳೆವ, ಶಾಶ್ವತ ಉಳಿವ ಜೋಡಿ ಕೊಂಬು. ಆನೆ ಮತ್ತು ವಾಲ್ರಸ್ ಗಳಲ್ಲಿ ಜೋಡಿಯಾಗಿ ಮತ್ತು ನಾರ್ವಾಲ್ ನಲ್ಲಿ ಒಂಟಿಯಾಗಿ ಬೆಳೆವ 'ದಂತ'ಗಳು ಕೊಂಬುಗಳಲ್ಲ; ಹೆಸರೇ ಸೂಚಿಸುವಂತೆ ಅವು ಹಲ್ಲುಗಳು ಅಷ್ಟೆ.

■ ಎನ್. ವಾಸುದೇವ್